ಕುಶಾಲನಗರ ಯೋಜನಾ ಪ್ರಾಧಿಕಾರ ಕುಶಾಲನಗರ

ಕಾವೇರಿ ಬಡಾವಣೆ, ಸಂ.05, ಬ್ಲಾಕ್ ನಂ.01, ಕುಶಾಲನಗರ – 571234

Email Id: kushalnagaradtp@hotmail.com ದೂರವಾಣಿ ಸಂ: 08276–274040

ಕುಶಾಲನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ.ಎಂ.ಎಂ. ಚರಣ್ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 06–01–2023 ರ ಶುಕ್ರವಾರದಂದು ಪೂರ್ವಾಹ್ನ 11.00 ಗಂಟೆಗೆ ನಡೆದ ಪ್ರಾಧಿಕಾರದ 53 ನೇ ಸಾಮಾನ್ಯ ಸಭೆಯ ನಡಾವಳಿ.

ಸಭೆಯಲ್ಲಿ ಹಾಜರಿದ್ದವರು :–

1. ಶ್ರೀ ಎಂ.ಎಂ. ಚರಣ್, ಅಧ್ಯಕ್ಷರು
2. ಶ್ರೀ ಪುಂಡರೀಕಾಕ್ಷ, ನಾಮನಿರ್ದೇಶಿತ ಸದಸ್ಯರು
3. ಶ್ರೀ ಮಧುಸೂಧನ್, ನಾಮನಿರ್ದೇಶಿತ ಸದಸ್ಯರು
4. ಮುಖ್ಯಾಧಿಕಾರಿಗಳು, ಪಟ್ಟಣಪಂಚಾಯಿತಿ, ಕುಶಾಲನಗರ
5. ಸದಸ್ಯ ಕಾರ್ಯದರ್ಶಿ, ಕುಶಾಲನಗರ ಯೋಜನಾ ಪ್ರಾಧಿಕಾರ

ಗೈರುಹಾಜರಾದವರು :–

1. ಶ್ರೀ ವೈಶಾಖ್, ನಾಮನಿರ್ದೇಶಿತ ಸದಸ್ಯರು.
2. ಶ್ರೀ ಅಮೃತ್‌ರಾಜ್, ಸ್ಥಳೀಯ ಸಂಸ್ಥೆ ನಾಮನಿರ್ದೇಶಿತ ಸದಸ್ಯರು

ವಿಷಯ ಸಂಖ್ಯೆ 01): ದಿನಾಂಕ:08–11–2022 ರಂದು ನಡೆದ ಪ್ರಾಧಿಕಾರದ 52ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಸ್ಥಿರೀಕರಿಸುವ ಬಗ್ಗೆ.

ಟಿಪ್ಪಣಿ: ದಿನಾಂಕ:08–11–2022 ರಂದು ನಡೆದ ಪ್ರಾಧಿಕಾರದ 52ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಓಪ್ಪಿ ಸ್ಥಿರೀಕರಿಸುವ ಬಗ್ಗೆ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

ನಿರ್ಣಯ: ಪ್ರಾಧಿಕಾರದ 52ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಸಭೆಯಲ್ಲಿ ಓದಿ, ಯಾವುದೇ ಆಕ್ಷೇಪಣೆ ವ್ಯಕ್ತವಾಗದ ಕಾರಣ ಸದರಿ ನಡವಳಿಗಳನ್ನು ಒಪ್ಪಿ ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ 02): ಪ್ರಾಧಿಕಾರದ ಖಾತೆಗೆ ಅಕ್ಟೋಬರ್–2022, ನವೆಂಬರ್–2022 ಮತ್ತು ಡಿಸೆಂಬರ್–2022ರ ಮಾಹೆಯ ಜಮಾ ಮತ್ತು ಖರ್ಚುಗಳ ವಿವರಗಳನ್ನು ಪ್ರಾಧಿಕಾರದ ಸಭೆಗೆ ಮಂಡಿಸುವ ಬಗ್ಗೆ.

ಟಿಪ್ಪಣಿ: ಅಕ್ಟೋಬರ್–2022, ನವೆಂಬರ್–2022 ಮತ್ತು ಡಿಸೆಂಬರ್–2022ರ ಮಾಹೆಯ ಜಮಾ & ಖರ್ಚುಗಳನ್ನು ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ.

ಕ್ರ. ಸಂ	ಖಾತೆಯ ವಿವರ	ಪ್ರಾರಂಭಿಕ ಶಿಲ್ಕು ರೂ.ಗಳಲ್ಲಿ	ಮಾಹೆಯ ಜಮಾ. ರೂ.ಗಳಲ್ಲಿ	ಮಾಹೆಯ ಖರ್ಚು. ರೂ.ಗಳಲ್ಲಿ	ಉಳಿಕೆ ಶಿಲ್ಕು ರೂ.ಗಳಲ್ಲಿ
1	2	3	4	5	6
ಅಕ್ಟೋಬರ್–2022					
1	ಉಳಿತಾಯ ಶುಲ್ಕದ ಖಾತೆ	34,91,779.50	1,12,810.00	2,08,324.00	33,96,265.50
2	ಕೆರೆ ಅಭಿವೃದ್ಧಿ ಶುಲ್ಕದ ಖಾತೆ	23,75,005.00	5,790.00	___	23,80,795.00
3	ಸೆಸ್ ಶುಲ್ಕದ ಖಾತೆ	13,72,716.00	2,270.00	___	13,74,986.00

ನವೆಂಬರ್–2022					
1	ಉಳಿತಾಯ ಶುಲ್ಕದ ಖಾತೆ	33,96,265.50	13,040.00	1,02,714.00	33,06,591.50
2	ಕೆರೆ ಅಭಿವೃದ್ಧಿ ಶುಲ್ಕದ ಖಾತೆ	23,80,795.00	——	——	23,80,795.00
3	ಸೆಸ್ ಶುಲ್ಕದ ಖಾತೆ	13,74,986.00	500.00	——	13,75,486.00
ಡಿಸೆಂಬರ್–2022					
1	ಉಳಿತಾಯ ಶುಲ್ಕದ ಖಾತೆ	33,06,591.50	3,57,834.00	16,16,414.00	20,48,011.50
2	ಕೆರೆ ಅಭಿವೃದ್ಧಿ ಶುಲ್ಕದ ಖಾತೆ	23,80,795.00	1,22,29,534.00	,45,02,875.00	1,07,454.00
3	ಸೆಸ್ ಶುಲ್ಕದ ಖಾತೆ	13,75,486.00	46,643.00	13,75,000.00	47,129.00

ಷರಾ: ಡಿಸೆಂಬರ್ ಮಾಹೆಯಲ್ಲಿ ಉಳಿತಾಯ ಖಾತೆಯ ರೂ. 15,00,000/–, ಕೆರೆ ಪುನಶ್ಚೇತನ ಶುಲ್ಕದ ರೂ. 2,66,78,796/–, ಸೆಸ್ ಶುಲ್ಕದ ರೂ. 13,75,000/– ಹಾಗೂ ಉದ್ಯಾನವನ ವಿನಾಯಿತಿ ಶುಲ್ಕದ ರೂ. 48,67,535/– ಗಳನ್ನು ಎಸ್.ಬಿ.ಐ ಬ್ಯಾಂಕಿನಲ್ಲಿ ಒಂದು ವರ್ಷದ ಅವಧಿಗೆ ನಿಶ್ಚಿತ ಠೇವಣಿಯಲ್ಲಿ ತೊಡಗಿಸಲಾಗಿದೆ.

ನಿರ್ಣಯ: ಅಕ್ಟೋಬರ್–2022, ನವೆಂಬರ್–2022 ಮತ್ತು ಡಿಸೆಂಬರ್–2022ರ ಮಾಹೆಯ ಜಮಾ ಮತ್ತು ಖರ್ಚುಗಳನ್ನು ಸಭೆಯಲ್ಲಿ ಚರ್ಚಿಸಿ, ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ 03): ದಿನಾಂಕ:27–10–2022 ರಿಂದ 04–01–2023 ರವರೆಗೆ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸದರಿ ಅನುಮೋದನೆಯನ್ನು ಸ್ಥಿರೀಕರಿಸಲು ಮಂಡಿಸಿರುವ ಬಗ್ಗೆ.

i. ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮಾದಾಪಟ್ಟಣ ಗ್ರಾಮದ ಸ.ನಂ. 11/4 ರಲ್ಲಿ 0.05 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (ಅರ್ಜಿದಾರರು:– ಶ್ರೀಮತಿ ಎಂ.ಎ. ಶೋಭ ಕೋಂ ವಿ.ಜಿ. ಲೋಕೇಶ್).

ಟಿಪ್ಪಣಿ: ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮಾದಾಪಟ್ಟಣ ಗ್ರಾಮದ ಸ.ನಂ. 11/4 ರಲ್ಲಿನ 0.05 ಎಕರೆ ವಿಸ್ತೀರ್ಣದ ಜಮೀನನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಇವರ ಅಧಿಕೃತ ಜ್ಞಾಪನ ಪತ್ರ ಸಂ:391110 ದಿನಾಂಕ:25–10–2022 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದ್ದು, ಸದರಿ ಜಮೀನಿನ ಪಶ್ಚಿಮಕ್ಕೆ ಸುಮಾರು 7ಮೀ ಅಗಲದ ಸಾರ್ವಜನಿಕ ರಸ್ತೆಗೆ ಲಗತ್ತಾಗಿದೆ. ಸದರಿ ರಸ್ತೆಯನ್ನು ಮಹಾಯೋಜನೆಯಂತೆ 15.0ಮೀ ಅಗಲಕ್ಕೆ ವಿಸ್ತರಿಸಲು ಪ್ರಸ್ತಾಪಿಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ಸಹಿ ಮಾಡಿ ನೀಡಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ಮಹಾಯೋಜನೆಯಲ್ಲಿ ಪ್ರಸ್ತಾಪಿಸಿರುವಂತೆ ಹಾಲಿ ರಸ್ತೆಯನ್ನು 15.0ಮೀ ಅಗಲಕ್ಕೆ ವಿಸ್ತರಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಸತಿ ಉಪಯೋಗಕ್ಕಾಗಿ 172.84 ಚ.ಮೀ (ಶೇ. 85.43%) ಮತ್ತು ರಸ್ತೆ ವಿಸ್ತರಣೆಗಾಗಿ 29.46 ಚ.ಮೀ (ಶೇ. 14.57%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ, ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ)

ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ದಿನಾಂಕ:20–12–2022 ರಂದು ಸದರಿ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಪ್ರಾಧಿಕಾರದಿಂದ ನೀಡಿರುವ ಅನುಮೋದನೆಯನ್ನು ಸ್ಥಿರೀಕರಿಸುವ ಸಂಬಂಧ ಚರ್ಚೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ii. ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮಾದಾಪಟ್ಟಣ ಗ್ರಾಮದ ಸ.ನಂ. 11/3 ರಲ್ಲಿನ 0.05 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (ಅರ್ಜಿದಾರರು:– ಶ್ರೀಮತಿ ಎಂ.ಎ. ಶೋಭ ಕೋಂ ವಿ.ಜಿ. ಲೋಕೇಶ್).

ಟಿಪ್ಪಣಿ: ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮಾದಾಪಟ್ಟಣ ಗ್ರಾಮದ ಸ.ನಂ. 11/3 ರಲ್ಲಿನ 0.05 ಎಕರೆ ವಿಸ್ತೀರ್ಣದ ಜಮೀನನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಇವರ ಅಧಿಕೃತ ಜ್ಞಾಪನ ಪತ್ರ ಸಂ:391109 ದಿನಾಂಕ:25–10–2022 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದ್ದು, ಸದರಿ ಜಮೀನಿನ ಪಶ್ಚಿಮಕ್ಕೆ ಸುಮಾರು 7ಮೀ ಅಗಲದ ಸಾರ್ವಜನಿಕ ರಸ್ತೆಗೆ ಲಗತ್ತಾಗಿದೆ. ಸದರಿ ರಸ್ತೆಯನ್ನು ಮಹಾಯೋಜನೆಯಂತೆ 15.0ಮೀ ಅಗಲಕ್ಕೆ ವಿಸ್ತರಿಸಲು ಪ್ರಸ್ತಾಪಿಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ಸಹಿ ಮಾಡಿ ನೀಡಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ಮಹಾಯೋಜನೆಯಲ್ಲಿ ಪ್ರಸ್ತಾಪಿಸಿರುವಂತೆ ಹಾಲಿ ರಸ್ತೆಯನ್ನು 15.0ಮೀ ಅಗಲಕ್ಕೆ ವಿಸ್ತರಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಸತಿ ಉಪಯೋಗಕ್ಕಾಗಿ 162.43 ಚ.ಮೀ (ಶೇ. 80.29%) ಮತ್ತು ರಸ್ತೆ ವಿಸ್ತರಣೆಗಾಗಿ 39.87 ಚ.ಮೀ (ಶೇ. 19.71%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ, ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ದಿನಾಂಕ:20–12–2022 ರಂದು ಸದರಿ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಪ್ರಾಧಿಕಾರದಿಂದ ನೀಡಿರುವ ಅನುಮೋದನೆಯನ್ನು ಸ್ಥಿರೀಕರಿಸುವ ಸಂಬಂಧ ಚರ್ಚೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

iii. ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಕೂಡ್ಲೂರು ಗ್ರಾಮದ ಸ.ನಂ. 44/28 ರಲ್ಲಿನ 0.15 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (ಅರ್ಜಿದಾರರು:– ಶ್ರೀ ಸುರೇಶ್.ಕೆ ಬಿನ್ ಕರಿಯಪ್ಪ).

ಟಿಪ್ಪಣಿ: ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಕೂಡ್ಲೂರು ಗ್ರಾಮದ ಸ.ನಂ. 44/28 ರಲ್ಲಿನ 0.15 ಎಕರೆ ವಿಸ್ತೀರ್ಣದ ಜಮೀನನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರ ಅಧಿಕೃತ ಜ್ಞಾಪನ ಪತ್ರ ಸಂ:409094 ದಿನಾಂಕ:16–11–2022 ರಂದು ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದ್ದು, ಸದರಿ ಜಮೀನಿನ ಉತ್ತರ ದಿಕ್ಕಿನಲ್ಲಿ ಸುಮಾರು 7 ಮೀ ಅಗಲದ ರಸ್ತೆಗೆ ಲಗತ್ತಾಗಿದ್ದು, ಮಹಾಯೋಜನೆಯಂತೆ ರಸ್ತೆ ಮತ್ತು ಸ.ನಂ.44 ರ ನಡುವೆ ಸ.ನಂ.12 ಎಂದು ಗುರುತಿಸಲಾಗಿರುತ್ತದೆ. ಅದರೆ ವಾಸ್ತವವಾಗಿ ಸ.ನಂ.12 ರಸ್ತೆಯಾಗಿದ್ದು, ಕಂದಾಯ ದಾಖಲಾತಿ ಅಂದರೆ ಗ್ರಾಮ ನಕ್ಷೆ ಮತ್ತು ಸರ್ವೆ ನಕ್ಷೆಯಂತೆ ಸ.ನಂ.44ಕ್ಕೆ ಹೊಂದಿಕೊಂಡಂತೆ ರಸ್ತೆ ಇರುವುದು ಕಂಡುಬಂದಿರುವುದರಿಂದ ಅನುಮೋದಿತ ವಲಯ ನಿಯಮಾವಳಿಯ ಅದ್ಯಾಯ–9 ರಂತೆ ಸದರಿ ರಸ್ತೆಯನ್ನು ಕಂದಾಯ ದಾಖಲಾತಿಯಂತೆ ಪರಿಗಣಿಸಿ, ಭೂದಾಖಲೆಗಳ ಸಹಾಯಕ ನಿರ್ದೇಶಕರು ಸಹಿ ಮಾಡಿ ನೀಡಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ಮಹಾ

ಯೋಜನೆಯಲ್ಲಿ ಪ್ರಸ್ತಾಪಿಸಿರುವಂತೆ ಹಾಲಿ ರಸ್ತೆಯನ್ನು 12.0ಮೀ ಅಗಲಕ್ಕೆ ವಿಸ್ತರಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಯಲ್ಲಿ ವಸತಿ ಉಪಯೋಗಕ್ಕಾಗಿ 558.77 ಚ.ಮೀ (ಶೇ. 92.42%) ಮತ್ತು ರಸ್ತೆ ವಿಸ್ತರಣೆಗಾಗಿ 45.82 ಚ.ಮೀ (ಶೇ.7.58%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ, ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ದಿನಾಂಕ:20–12–2022 ರಂದು ಸದರಿ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಪ್ರಾಧಿಕಾರದಿಂದ ನೀಡಿರುವ ಅನುಮೋದನೆಯನ್ನು ಸ್ಥಿರೀಕರಿಸುವ ಸಂಬಂಧ ಚರ್ಚೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ನಿರ್ಣಯ: ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ ಮೇಲ್ಕಾಣಿಸಿದ ಏಕ ನಿವೇಶನಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಈಗಾಗಲೇ ನಕ್ಷೆಗಳಿಗೆ ತಾಂತ್ರಿಕ ಅನುಮೋದನೆ ನೀಡಿರುವುದನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ 04): ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯನ್ನು ವಿಸ್ತರಿಸುವ ಬಗ್ಗೆ.

ಟಿಪ್ಪಣಿ: ದಿನಾಂಕ:08–11–2022 ರಂದು ನಡೆದ ಪ್ರಾಧಿಕಾರದ 52ನೇ ಸಾಮಾನ್ಯ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ6(ಅ) ರ ನಿರ್ಣಯದಂತೆ ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯನ್ನು ವಿಸ್ತರಿಸುವ ಸಂಬಂಧ ನಕ್ಷೆ ಸಿದ್ಧಪಡಿಸಲು ದರಪಟ್ಟಿ ಸಲ್ಲಿಸುವಂತೆ ಪ್ರಕಟಣೆ ಹೊರಡಿಸಲಾಗಿ, ಅದರಂತೆ ಮೂರು ಸಂಸ್ಥೆಗಳಿಂದ ದರಪಟ್ಟಿಗಳು ಪ್ರಾಧಿಕಾರಕ್ಕೆ ಸ್ವೀಕೃತವಾಗಿದ್ದು, ಅವುಗಳ ಪೈಕಿ ಬಿಬಿಸಿ ಟ್ರಯಾಂಗಲ್ ಸಂಸ್ಥೆಯ ದರಪಟ್ಟಿಯು ಕಡಿಮೆ ಇರುತ್ತದೆ. ಆದ್ದರಿಂದ ಸದರಿ ಸಂಸ್ಥೆಗೆ ಕಾರ್ಯಾದೇಶ ನೀಡಲಾಗಿದ್ದು, ಸದರಿ ಸಂಸ್ಥೆಯವರು ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶವನ್ನು ವಿಸ್ತರಿಸುವ ಸಂಬಂಧ ನಕ್ಷೆಯನ್ನು ಸಿದ್ಧಪಡಿಸಿ ಸಲ್ಲಿಸಿರುತ್ತಾರೆ. ಸದರಿ ನಕ್ಷೆಯಂತೆ ಮುಳ್ಳುಸೋಗೆ, ಗುಮ್ಮನಕೊಲ್ಲಿ, ಬೈಚನಹಳ್ಳಿ, ಕೂಡ್ಲೂರು, ಮಾದಾಪಟ್ಟಣ, ಕೂಡುಮಂಗಳೂರು, ಕೂಡಿಗೆ, ಚಿಕ್ಕತ್ತೂರು, ದೊಡ್ಡತ್ತೂರು, ಬಸವನತ್ತೂರು, ಗೊಂದಿಬಸವನಹಳ್ಳಿ, ಗುಡ್ಡೆಹೊಸೂರು, ಬೊಳ್ಳೂರು, ಅತ್ತೂರು, ಬಸವನಹಳ್ಳಿ, ದೊಡ್ಡಬೆಟಗೇರಿ, ಚಿಕ್ಕಬೆಟಗೇರಿ ಗ್ರಾಮಗಳ ಪೂರ್ಣ ಕಂದಾಯ ಗ್ರಾಮವನ್ನು ಒಳಗೊಂಡಿದ್ದು, ಆನೆಕಾಡು ಸಂರಕ್ಷಿತ ಅರಣ್ಯ ಪ್ರದೇಶವನ್ನು ಹೊರತುಪಡಿಸಿ ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶದ ನಕ್ಷೆಯನ್ನು ಸಿದ್ಧಪಡಿಸಿ ಸಲ್ಲಿಸಿದ್ದು ಒಟ್ಟು ವಿಸ್ತೀರ್ಣವು ಸುಮಾರು 3406.13 ಹೆಕ್ಟೇರ್ ವಿಸ್ತೀರ್ಣವಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ4(ಎ) ರನ್ವಯ ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶವನ್ನು ವಿಸ್ತರಿಸುವ ಕುರಿತು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವ ಸಂಬಂಧ ಚರ್ಚೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

ಚರ್ಚೆ: ಕುಶಾಲನಗರ ಸ್ಥಳೀಯ ಪ್ರದೇಶವನ್ನು ವಿಸ್ತರಿಸುವ ಕುರಿತು ಸಿದ್ಧಪಡಿಸಿರುವ ನಕ್ಷೆಯನ್ನು ಸಭೆಯು ಪರಿಶೀಲಿಸಿತು. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 221 ಎಂಎಲ್ಆರ್ 2021(ಇ) ಬೆಂಗಳೂರು ದಿನಾಂಕ:08–12–2022 ರಂದು ಕುಶಾಲನಗರ ಪಟ್ಟಣ ಪಂಚಾಯಿತಿಯನ್ನು ಕುಶಾಲನಗರ ಪುರಸಭೆ ಎಂದು ಉದ್ಘೋಷಿಸಲಾಗಿದೆ. ಪ್ರಸ್ತುತ ಕುಶಾಲನಗರ ಪುರಸಭೆ ವ್ಯಾಪ್ತಿಯು ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಹೊರಭಾಗದ ಪ್ರದೇಶವನ್ನು ಸಹ ಒಳಗೊಂಡಿರುವುದರಿಂದ ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶವನ್ನು ವಿಸ್ತರಿಸಲು ಪ್ರಸ್ತಾಪಿಸಿರುವುದು ಸೂಕ್ತವೆಂದು ಸಭೆಯಲ್ಲಿ ಉಪಸ್ಥಿತರಿದ್ದ ಮುಖ್ಯಾಧಿಕಾರಿಗಳು ಅಭಿಪ್ರಾಯಿಸಿದರು. ಮುಖ್ಯಾಧಿಕಾರಿಗಳ ಅಭಿಪ್ರಾಯಕ್ಕೆ ಎಲ್ಲಾ ಸದಸ್ಯರು ಹಾಗೂ ಅಧ್ಯಕ್ಷರು ಒಪ್ಪಿಗೆ ಸೂಚಿಸಿದರು.

ನಿರ್ಣಯ: ವಿಸ್ತೃತ ಚರ್ಚೆ ನಡೆದು ಕುಶಾಲನಗರ ಪಟ್ಟಣವು ಅಭಿವೃದ್ಧಿ ಹೊಂದುತ್ತಿರುವ ನಗರ ಪ್ರದೇಶವಾಗಿದ್ದು, ನಗರದ ಯೋಜನಾಬದ್ಧ ಬೆಳವಣಿಗೆಯ ದೃಷ್ಟಿಯಿಂದ ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶವನ್ನು ವಿಸ್ತರಿಸಲು ಸಭೆಯು ಒಪ್ಪಿ ಈ ಸಂಬಂಧ ಪ್ರಸ್ತಾವನೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ4(ಎ) ರನ್ವಯ ಸರ್ಕಾರಕ್ಕೆ ಸಲ್ಲಿಸಲು ಸರ್ವಾನುಮತದಿಂದ ನಿರ್ಣಯಿಸಿ ಮುಂದಿನ ಅಗತ್ಯ ಕ್ರಮಕೈಗೊಳ್ಳಲು ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಲಾಯಿತು.

ವಿಷಯ ಸಂಖ್ಯೆ 05): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 48 ರಲ್ಲಿನ 4.26 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಬಹು ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುವ ಬಗ್ಗೆ. **(ಅರ್ಜಿದಾರರು: ಶ್ರೀ ಜೆಮ್ಸಿ ಪೊನ್ನಪ್ಪ ಸಿ.ಪಿ)**

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 48 ರಲ್ಲಿ 5.16 ಎಕರೆ ಪೈಕಿ 4.26 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಬಹು ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿ ಶ್ರೀ ಜೆಮ್ಸಿ ಪೊನ್ನಪ್ಪ ಸಿ.ಪಿ ಬಿನ್ ಲೇಟ್ ಸಿ.ಎಸ್. ಪೂಣಚ್ಚ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮುಳ್ಳುಸೋಗೆ ಗ್ರಾಮಪಂಚಾಯಿತಿ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದ್ದು, ಜಮೀನಿನ ಪಶ್ಚಿಮಕ್ಕೆ ಹಾಲಿ 12.0ಮೀ ಅಗಲದ ಬಡಾವಣೆ ರಸ್ತೆಗೆ ಹೊಂದಿಕೊಂಡಿರುತ್ತದೆ. ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ ಇವರ ಅಧಿಕೃತ ಜ್ಞಾಪನ ಪತ್ರ ಸಂ:325278 ದಿನಾಂಕ:25–08–2022 ರಂದು ಸದರಿ ಜಮೀನನ್ನು ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ಹಾಗೂ ಟೋಟಲ್ ಸ್ಟೇಷನ್ ನಕ್ಷೆಯಂತೆ ವಿನ್ಯಾಸದಲ್ಲಿ ಸುತ್ತಳತೆ ಹಾಗೂ ಎಲ್ಲೆಯನ್ನು ನಿಗಧಿಪಡಿಸಿ ಅರ್ಜಿದಾರರು ವಿನ್ಯಾಸ ನಕ್ಷೆಯನ್ನು ಸಲ್ಲಿಸಿದ್ದು, ಅದರಂತೆ ವಸತಿಗಾಗಿ 8764.62 ಚ.ಮೀ (ಶೇ.50.84), ಉದ್ಯಾನವನಕ್ಕಾಗಿ 1727.75 ಚ.ಮೀ (ಶೇ.10.02), ನಾಗರೀಕ ಸೌಲಭ್ಯಕ್ಕಾಗಿ 863.66 ಚ.ಮೀ (ಶೇ.5.01), ರಸ್ತೆಗಾಗಿ 4078.84 ಚ.ಮೀ (ಶೇ.23.67) ಹಾಗೂ ಅರ್ಜಿದಾರರು ಸಲ್ಲಿಸಿರುವ ಪ್ರಮಾಣ ಪತ್ರ ಹಾಗೂ ಟೋಟಲ್ ಸ್ಟೇಷನ್ ನಕ್ಷೆಯಂತೆ ಸ್ಥಳದಲ್ಲಿ ಲಭ್ಯವಿಲ್ಲದ ಪ್ರದೇಶ 1803.84 ಚ.ಮೀ (ಶೇ.10.46) ಒಟ್ಟು 17238.78 ಚ.ಮೀ (ಶೇ.100) ಕಾಯ್ದಿರಿಸಿದ್ದು, ಅನುಮೋದಿತ ವಲಯ ನಿಯಮಾವಳಿಯಂತೆ ತಾಳೆ ಹೊಂದುತ್ತಿದ್ದು, ಸದರಿ ವಸತಿ ಬಹುನಿವೇಶನ ವಿನ್ಯಾಸ ನಕ್ಷೆಗೆ ಅನುಮೋದಿತ ವಲಯ ನಿಯಮಾವಳಿಯ ಅಧ್ಯಾಯ 34(ಎ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17(2ಎ) ರನ್ವಯ ತಾತ್ಕಾಲಿಕ ಅನುಮೋದನೆ ನೀಡಲು ಅವಕಾಶ ಕಲ್ಪಿಸಲಾಗಿದೆ. ಆದ್ದರಿಂದ ಸದರಿ ವಸತಿ ಬಹುನಿವೇಶನ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡುವ ಸಂಬಂಧ ಚರ್ಚೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ನಿರ್ಣಯ: ವಿಸ್ತೃತವಾಗಿ ಚರ್ಚಿಸಲಾಯಿತು. ಅರ್ಜಿದಾರರು ಸಲ್ಲಿಸಿರುವ ವಿನ್ಯಾಸ ನಕ್ಷೆಯನ್ನು ಸಭೆಯು ಕೂಲಂಕುಷವಾಗಿ ಪರಿಶೀಲಿಸಿ, ಪ್ರಶ್ನಿತ ಜಮೀನು ಅನುಮೋದಿತ ಮಹಾಯೋಜನೆಯಲ್ಲಿ ವಸತಿ ವಲಯದಲ್ಲಿದ್ದು, ವಸತಿ ಉದ್ದೇಶಕ್ಕೆ ಭೂ–ಪರಿವರ್ತನೆಗೊಂಡಿರುವುದರಿಂದ ಹಾಗೂ ಸಾರ್ವಜನಿಕ ರಸ್ತೆಗೆ ಲಗತ್ತಾಗಿರುವುದರಿಂದ, ಅರ್ಜಿದಾರರು ಸಲ್ಲಿಸಿರುವ ವಿನ್ಯಾಸ ನಕ್ಷೆಯಲ್ಲಿ ಅಗತ್ಯವಿದ್ದಲ್ಲಿ ಸೂಕ್ತ ಮಾರ್ಪಾಡುಗಳನ್ನು ಅಳವಡಿಸಿಕೊಂಡು ಭೂಉಪಯೋಗ ವಿಶ್ಲೇಷಣೆಯನ್ನು ಮತ್ತೊಮ್ಮೆ ಪರಿಶೀಲಿಸಿ ವಲಯ ನಿಯಮಾವಳಿಯ ಅಧ್ಯಾಯ 34(ಎ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17(2ಎ) ರನ್ವಯ ಭೂಪರಿವರ್ತಿತ ಜಮೀನಿನ ವಸತಿ ಬಹು ನಿವೇಶನ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿ ಮುಂದಿನ ಅಗತ್ಯ ಕ್ರಮಕೈಗೊಳ್ಳಲು ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಲಾಯಿತು.

ವಿಷಯ ಸಂಖ್ಯೆ 06): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಬೈಚನಹಳ್ಳಿ ಗ್ರಾಮದ ಸ.ನಂ. 52 ರಲ್ಲಿ 10.26 ಎಕರೆ ಮತ್ತು ಸ.ನಂ. 80/1 ರಲ್ಲಿ 0.79 ಎಕರೆ ಒಟ್ಟು 11.05 ಎಕರೆ ವಿಸ್ತೀರ್ಣದ ಜಮೀನಿನ ವಾಣಿಜ್ಯ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುವ ಬಗ್ಗೆ (**ಅರ್ಜಿದಾರರು:– ಶ್ರೀ ಎನ್. ವಿಶ್ವನಾಥ್ ಮತ್ತು ವಿ. ವಿಶಾಲಾಕ್ಷಿ**).

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ ಶ್ರೀ ಎನ್. ವಿಶ್ವನಾಥ್ ಮತ್ತು ವಿ. ವಿಶಾಲಾಕ್ಷಿ ಇವರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ಈ ಹಿಂದೆ ಸ.ನಂ. 52, 80/1, 80/3 ರಲ್ಲಿ ಒಟ್ಟು 12.82 ಎಕರೆ ವಿಸ್ತೀರ್ಣದ ಜಮೀನಿನ ವಾಣಿಜ್ಯ ಬಹು ನಿವೇಶನ ವಿನ್ಯಾಸ ನಕ್ಷೆಗೆ ದಿನಾಂಕ:28–04–2017 ರಂದು ಅನುಮೋದನೆ ನೀಡಿದ್ದು, ಕಾರಣಾಂತರಗಳಿಂದ ಅಭಿವೃದ್ಧಿಪಡಿಸಲು ಸಾಧ್ಯವಾಗಿರುವುದಿಲ್ಲ, ರಸ್ತೆ, ಉದ್ಯಾನವನ ಜಾಗಗಳನ್ನು ಹಸ್ತಾಂತರಿಸಿರುವುದಿಲ್ಲ ಹಾಗೂ ಭೂಪರಿವರ್ತನೆ ಆದೇಶವು ಪ್ರತ್ಯೇಕವಾಗಿರುವುದರಿಂದ ಸ.ನಂ. 80/3 ರ ಹಿಂಭಾಗದಲ್ಲಿ ಭೂಪರಿವರ್ತನೆಯಾಗದ 80/14ರ ಜಮೀನು ಇರುವುದರಿಂದ ಸ.ನಂ. 80/3 ಅನ್ನು ಹೊರತುಪಡಿಸಿ ಪ್ರತ್ಯೇಕ ಭೂಪರಿವರ್ತನೆ ಆದೇಶದಲ್ಲಿರುವಂತೆ ಎ ಖರಾಬನ್ನು ಸೇರಿಸಿಕೊಂಡಂತೆ ಸ.ನಂ. 52 ರಲ್ಲಿ 10.26 ಎಕರೆ ಹಾಗೂ ಸ.ನಂ. 80/1 ರಲ್ಲಿ 0.79 ಎಕರೆ ಒಟ್ಟು 11.05 ಎಕರೆ ವಾಣಿಜ್ಯ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬೇಕೆಂದು ಕೋರಿರುತ್ತಾರೆ.

ಪರಿಶೀಲಿಸಲಾಗಿ,

- ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ ಇವರ ಅಧಿಕೃತ ಜ್ಞಾಪನ ಪತ್ರ ಸಂ:ಭೂಪರಿ/ 08/2014–15 ದಿನಾಂಕ:27–05–2016 ರಂದು ಬೈಚನಹಳ್ಳಿ ಗ್ರಾಮದ ಸ.ನಂ. 80/3 ರಲ್ಲಿ 2.0 ಎಕರೆ ಜಮೀನನ್ನು ವಾಣಿಜ್ಯ ಉದ್ದೇಶಕ್ಕಾಗಿ ಜ್ಞಾಪನ ಪತ್ರ ಸಂ:ಭೂಪರಿ/ಇತರೆ/ 05/2014–15 ದಿನಾಂಕ:27–05–2016 ರಂದು ಬೈಚನಹಳ್ಳಿ ಗ್ರಾಮದ ಸ.ನಂ. 52 ರಲ್ಲಿ 9.82 ಎಕರೆ, 80/1 ರಲ್ಲಿ 0.7 ಎಕರೆ & 80/1 ರಲ್ಲಿ 0.3 ಎಕರೆ ಒಟ್ಟು 10.82 ಎಕರೆ ವಿಸ್ತೀರ್ಣದ ಜಮೀನುಗಳನ್ನು ವಾಣಿಜ್ಯ (ರೆಸಾರ್ಟ್) ಉದ್ದೇಶಕ್ಕೆ ಭೂ ಪರಿವರ್ತಿಸಿ ಎರಡು ಪ್ರತ್ಯೇಕ ಅಧಿಕೃತ ಜ್ಞಾಪನ ಹೊರಡಿಸಿದ್ದು, ಒಟ್ಟಾರೆ ವಿಸ್ತೀರ್ಣವು 12.82 ಎಕರೆ ಇರುತ್ತದೆ.
- ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ, ಕುಶಾಲನಗರ ಇವರ ಪತ್ರ ಸಂ:ಪಪಂಕು/ ಸಿ1/2017–18 ದಿನಾಂಕ:06–04–2017 ರಂದು ಬೈಚನಹಳ್ಳಿ ಗ್ರಾಮದ ಸ.ನಂ. 52 ರಲ್ಲಿ 9.82 ಎಕರೆ, 80/1 ರಲ್ಲಿ 0.7 ಎಕರೆ, 80/1 ರಲ್ಲಿ 0.3 ಎಕರೆ ಹಾಗೂ 80/3 ರಲ್ಲಿ 2.0 ಎಕರೆ ಒಟ್ಟು 12.82 ಎಕರೆ ವಿಸ್ತೀರ್ಣದ ಜಮೀನಿನ ವಾಣಿಜ್ಯ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕಡತವನ್ನು ಪ್ರಾಧಿಕಾರಕ್ಕೆ ಸಲ್ಲಿಸಲಾಗಿದೆ.
- ಪ್ರಾಧಿಕಾರದ ಆದೇಶ ಪತ್ರ ಸಂ: ಕುಯೋಪ್ರಾ/ಸಕಾ/ಸೋತಾ/ಬೈಚನಹಳ್ಳಿ ಗ್ರಾಮ/ ವಿ.ಅ/01/2017–18 ದಿನಾಂಕ:28–04–2017 ರಂದು ಬೈಚನಹಳ್ಳಿ ಗ್ರಾಮದ ಸ.ನಂ. 52 ರಲ್ಲಿ 9.82 ಎಕರೆ, ಸ.ನಂ. 80/1 ರಲ್ಲಿ 1.0 ಎಕರೆ, ಸ.ನಂ. 80/3 ರಲ್ಲಿ 2.0 ಎಕರೆ ಒಟ್ಟು 12.82 ಎಕರೆ ವಿಸ್ತೀರ್ಣದ ಜಮೀನಿನ ವಾಣಿಜ್ಯ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿರುತ್ತದೆ.
- ಶ್ರೀ ಎನ್. ವಿಶ್ವನಾಥ್ ಮತ್ತು ವಿಶಾಲಾಕ್ಷಿ ಇವರು ದಿನಾಂಕ:16–10–2018 ರಂದು ಹಾಗೂ ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ ಕುಶಾಲನಗರ ಇವರು ದಿನಾಂಕ:31–10–2018 ರಂದು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ಹಿಂದೆ ಅನಮೋದನೆ ನೀಡಿರುವ ವಿನ್ಯಾಸ ನಕ್ಷೆಯನ್ನು ರದ್ದುಪಡಿಸಿ ಪರಿಷ್ಕೃತ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.
- ಪ್ರಾಧಿಕಾರದ ಆದೇಶ ಪತ್ರ ಸಂ: ಕುಯೋಪ್ರಾ/ಸಕಾ/ಸೋತಾ/ಬೈಚನಹಳ್ಳಿ ಗ್ರಾಮ/ ವಿ.ಅ/02/2019–20 ದಿನಾಂಕ:23–04–2019 ರಂದು ಬೈಚನಹಳ್ಳಿ ಗ್ರಾಮದ ಸ.ನಂ. 52 ರಲ್ಲಿ 9.82 ಎಕರೆ, ಸ.ನಂ. 80/1 ರಲ್ಲಿ 1.0 ಎಕರೆ, ಸ.ನಂ. 80/3 ರಲ್ಲಿ 2.0 ಎಕರೆ ಒಟ್ಟು 12.82 ಎಕರೆ ವಿಸ್ತೀರ್ಣ ಜಮೀನಿನ ಪರಿಷ್ಕೃತ ವಾಣಿಜ್ಯ ಕರಡು ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿರುತ್ತದೆ.

- ಶ್ರೀ ಅಮೃತೇಶ್.ಎನ್.ಪಿ, ವಕೀಲರು ಇವರು ದಿನಾಂಕ:08–09–2021 ರಂದು ಮನವಿ ಸಲ್ಲಿಸಿ ಸದರಿ ಜಮೀನಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ಆಕ್ಷೇಪಣೆಯ ಕುರಿತು ದಿನಾಂಕ:18–09–2021 ರಂದು ನಡೆದ ಪ್ರಾಧಿಕಾರದ 42ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(9) ರಲ್ಲಿ ಚರ್ಚಿಸಿ ಕೈಗೊಂಡಿರುವ ನಿರ್ಣಯದನ್ವಯ ದಿನಾಂಕ:05–10–2021 ರಂದು ಜಮೀನಿನ ಮಾಲೀಕರಾದ ಶ್ರೀ ಎನ್.ವಿಶ್ವನಾಥ್ ಮತ್ತು ಶ್ರೀ ವಿಶಾಲಾಕ್ಷಿ ಇವರಿಗೆ ಕೃತಕವಾಗಿ ಮಣ್ಣು ತುಂಬಿಸುತ್ತಿರುವ ಬಗ್ಗೆ ಕಾರಣವನ್ನು ನೀಡಲು ಸೂಚಿಸಲಾಗಿದೆ. ಅದರಂತೆ ಜಮೀನಿನ ಮಾಲೀಕರು ದಿನಾಂಕ:16–10–2021 ರಂದು ವಿವರವಾದ ವರದಿಯನ್ನು ಸಲ್ಲಿಸಿರುತ್ತಾರೆ. ಅದರನ್ವಯ ದಿನಾಂಕ:24–12–2021 ರಂದು ನಡೆದ ಪ್ರಾಧಿಕಾರದ 46ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(9)ರ ನಿರ್ಣಯದನ್ವಯ ದಿನಾಂಕ:28–01–2021 ರಂದು ಕಟ್ಟಡ ನಿರ್ಮಿಸುವಾಗ ಕಡ್ಡಾಯವಾಗಿ ಮಣ್ಣು ಪರೀಕ್ಷೆ ಮಾಡಿಸಿ ಕುಟಜ ಜಿಠಣಟಿಜಚಿಣುಠಟಿ ಅಳವಡಿಸಿಕೊಂಡು ಕಟ್ಟಡ ನಿರ್ಮಿಸಿಕೊಳ್ಳುವ ಬಗ್ಗೆ ನಿವೇಶನ ಖರೀದಿದಾರರ ಗಮನಕ್ಕೆ ತರಲು ಸೂಚನಾ ಫಲಕವನ್ನು ಅಳವಡಿಸುವಂತೆ ಜಮೀನಿನ ಮಾಲೀಕರಿಗೆ ಸೂಚಿಸಿ ಶ್ರೀ ಅಮೃತೇಶ್ ಎನ್.ಪಿ ವಕೀಲರು ಇವರಿಗೆ ಪ್ರತಿಯನ್ನು ಕಳುಹಿಸಲಾಗಿರುತ್ತದೆ.
- ದಿನಾಂಕ:30–03–2022 ರಂದು ನಡೆದ ಪ್ರಾಧಿಕಾರದ 48ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(4)ರ ನಿರ್ಣಯದನ್ವಯ ದಿನಾಂಕ:29–04–2022ರ ಪ್ರಾಧಿಕಾರದ ಪತ್ರದಲ್ಲಿ ಜಮೀನಿನ ಮಾಲೀಕರಿಗೆ ಅಭಿವೃದ್ಧಿ ಕಾರ್ಯವನ್ನು ಮುಂದುವರೆಸದಂತೆ ನೋಟೀಸ್ ನೀಡಲಾಗಿದೆ.
- ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ ಇವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ 338633 ದಿನಾಂಕ:11–05–2022 ಮತ್ತು ತಿದ್ದುಪಡಿ ದಿನಾಂಕ:17–05–2022 ರಲ್ಲಿ ಬೈಚನಹಳ್ಳಿ ಗ್ರಾಮದ ಸ.ನಂ. 52 ರಲ್ಲಿ 9.82 ಎಕರೆ ಹಾಗೂ ಎ ಖರಾಬು 0.44 ಎಕರೆ ಜಮೀನನ್ನು ಹಾಗೂ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ 338636 ದಿನಾಂಕ:11–05–2022 ಮತ್ತು ತಿದ್ದುಪಡಿ ದಿನಾಂಕ:17–05–2022 ರಲ್ಲಿ ಬೈಚನಹಳ್ಳಿ ಗ್ರಾಮದ ಸ.ನಂ. 80/2 ರಲ್ಲಿ 0.7 ಎಕರೆ ಹಾಗೂ ಎ ಖರಾಬು 0.09 ಎಕರೆ ಜಮೀನನ್ನು ವಾಣಿಜ್ಯ ಉದ್ದೇಶಕ್ಕಾಗಿ ಶ್ರೀ ಅರ್ಜುನ್ ಇವರ ಹೆಸರಿಗೆ ಭೂಪರಿವರ್ತಿಸಿ ಆದೇಶಿಸಲಾಗಿದೆ.
- ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ, ಕುಶಾಲನಗರ ಇವರು ದಿನಾಂಕ:14–09–2022 ರಂದು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ಬೈಚನಹಳ್ಳಿ ಗ್ರಾಮದ ಸ.ನಂ. 52 ರಲ್ಲಿ 9.82 ಎಕರೆ, 10/1 ರಲ್ಲಿ 0.7 ಎಕರೆ ಒಟ್ಟು 10.96 ಎಕರೆ ವಿಸ್ತೀರ್ಣದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುತ್ತಾರೆ.
- ಸದರಿ ಜಮೀನನ್ನು ಅರ್ಜಿದಾರರಾದ ಶ್ರೀ ಎನ್. ವಿಶ್ವನಾಥ್ ಮತ್ತು ಶ್ರೀಮತಿ ವಿಶಾಲಾಕ್ಷಿ ಇವರು ದಿನಾಂಕ:08–04–2016 ರಂದು ಕ್ರಯಕ್ಕೆ ಪಡೆದಿದ್ದು, ಸದರಿ ಕ್ರಯಪತ್ರದಲ್ಲಿ ಸ.ನಂ. 52 ರಲ್ಲಿ 44 ಸೆಂಟ್ ಖರಾಬು ಜಾಗ ಇರುವುದಾಗಿ ಉಲ್ಲೇಖಿಸಲಾಗಿದೆ. ಆದರೆ ಅದನ್ನು ಕ್ರಯಕ್ಕೆ ಪಡೆದಿರುವುದು ಕಂಡುಬಂದಿರುವುದಿಲ್ಲ ಹಾಗೂ ಸ.ನಂ. 80/1 ರಲ್ಲಿ 9 ಸೆಂಟು ಖರಾಬು ಜಾಗವನ್ನು ಕ್ರಯಕ್ಕೆ ಪಡೆದಿರುವುದು ಕಂಡುಬಂದಿರುವುದಿಲ್ಲ.
- ಸದರಿ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆಯಂತೆ ವಾಣಿಜ್ಯ ವಲಯದಲ್ಲಿದ್ದು, ನದಿ ನೀರಿನ ಜಲಾವೃತ ಪ್ರದೇಶದಲ್ಲಿ ಬರುತ್ತಿದ್ದು ಕಟ್ಟಡ ನಿರ್ಮಿಸುವ ಸಂದರ್ಭದಲ್ಲಿ ವಲಯ ನಿಯಮಾವಳಿಯ ಅಧ್ಯಾಯ–8(ಬಿ) ರಂತೆ ಕ್ರಮವಹಿಸಬೇಕಾಗಿರುತ್ತದೆ

ಮೇಲ್ಕಂಡ ಎಲ್ಲಾ ಅಂಶಗಳನ್ನು ಸಭೆಯ ಅವಗಾಹನೆಗೆ ತರುತ್ತಾ, ಜಿಲ್ಲಾಧಿಕಾರಿಗಳು ಕೊಡಗು ಜಿಲ್ಲೆ ಇವರು ದಿನಾಂಕ:11–02–2022 ಮತ್ತು 17–02–2022 ರಂದು ಹೊರಡಿಸಿರುವ ಅಧಿಕೃತ ಜ್ಞಾಪನ ಪತ್ರದಂತೆ ಸ.ನಂ. 52 ರಲ್ಲಿ 44 ಸೆಂಟ್ ಮತ್ತು ಸ.ನಂ. 80/1 ರಲ್ಲಿ 9 ಸೆಂಟ್ ಒಟ್ಟು 53 ಸೆಂಟ್ 'ಎ'

ಖರಾಬು ಜಾಗವನ್ನು ಭೂಪರಿವರ್ತಿಸಿರುವುದರಿಂದ ಸದರಿ ವಿಸ್ತೀರ್ಣವನ್ನು ಒಳಗೊಂಡ ಕ್ರಯಪತ್ರವನ್ನು ಸಲ್ಲಿಸಿದ ನಂತರ ಒಟ್ಟು ವಿಸ್ತೀರ್ಣಕ್ಕೆ ಮಾರ್ಪಡಿತ ವಾಣಿಜ್ಯ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದಾಗಿದ್ದು, ಅರ್ಜಿದಾರರು ಸಲ್ಲಿಸಿರುವ ವಿನ್ಯಾಸ ನಕ್ಷೆಯಲ್ಲಿ ವಾಣಿಜ್ಯಕ್ಕಾಗಿ 35408 ಚ.ಮೀ (ಶೇ.79.19), ಬಯಲುಜಾಗ(ಬಫರ್) 4567.94 ಚ.ಮೀ (ಶೇ.10.02), ವಾಹನ ನಿಲುಗಡೆ 2316.57 ಚ.ಮೀ (ಶೇ.5.18), ರಸ್ತೆಗಾಗಿ 2419.40 ಚ.ಮೀ (ಶೇ.5.61) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿದ್ದು, ಅನುಮೋದಿತ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ರನ್ವಯ ಸದರಿ ವಾಣಿಜ್ಯ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಸಂಬಂಧ ಚರ್ಚೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ನಿರ್ಣಯ: ವಿಸ್ತೃತವಾಗಿ ಚರ್ಚಿಸಲಾಗಿ, ಪ್ರಸ್ತಾವಿತ ಪ್ರದೇಶವು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿದ್ದು, ವಾಣಿಜ್ಯ ಉದ್ದೇಶಕ್ಕೆ ಭೂಪರಿವರ್ತನೆಯಾಗಿರುವುದರಿಂದ ಈ ಹಿಂದೆ ಅನುಮೋದಿಸಿರುವ ವಾಣಿಜ್ಯ ಬಹು ನಿವೇಶನ ವಿನ್ಯಾಸ ನಕ್ಷೆಯನ್ನು ಮಾರ್ಪಡಿಸಿ ವಾಣಿಜ್ಯ ಏಕನಿವೇಶನ ವಿನ್ಯಾಸ ನಕ್ಷೆ ಅನುಮೋದನೆಗೆ ಸಲ್ಲಿಸಿರುವ ನಕ್ಷೆಯಂತೆ ಶೇಕಡಾವಾರು ಭೂಉಪಯೋಗಗಳನ್ನು ಪರಿಶೀಲಿಸಿ ವ್ಯತ್ಯಾಸವಿದ್ದಲ್ಲಿ ಸರಿಪಡಿಸಿಕೊಂಡು, ಸದರಿ ಜಮೀನು ಜಲಾವೃತಗೊಳ್ಳುವ ಪ್ರದೇಶದಲ್ಲಿರುವುದರಿಂದ ಜಲಾವೃತ ಪ್ರದೇಶಗಳಲ್ಲಿ ಕಟ್ಟಡ ನಿರ್ಮಿಸಲು ವಲಯ ನಿಯಮಾವಳಿಯಂತೆ ವಿಧಿಸಲಾಗುವ ಎಲ್ಲಾ ನಿಯಮಗಳಿಗೆ ಒಳಪಟ್ಟು ಹಾಗೂ ಭೂಪರಿವರ್ತಿಸಿರುವ 'ಎ' ಖರಾಬು ಜಾಗವು ಅರ್ಜಿದಾರರ ಹೆಸರಿಗೆ ಕ್ರಯವಾಗದ ಕಾರಣ ಸದರಿ ಖರಾಬು ವಿಸ್ತೀರ್ಣವನ್ನು ಹೊರತುಪಡಿಸಿ ವಾಣಿಜ್ಯ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿ ಮುಂದಿನ ಅಗತ್ಯ ಕ್ರಮಕೈಗೊಳ್ಳಲು ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಲಾಯಿತು.

ವಿಷಯ ಸಂಖ್ಯೆ 07): ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು:

(ಅ): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಬೈಚನಹಳ್ಳಿ ಗ್ರಾಮದ ಸ.ನಂ. 33/1ಪಿ2 ಹೊಸ ನಂಬರ್ 33/4 ರಲ್ಲಿ 1.35 ಎಕರೆ ವಿಸ್ತೀರ್ಣ ಭೂಪರಿವರ್ತಿತ ಜಮೀನಿನ ವಾಣಿಜ್ಯ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುವ ಬಗ್ಗೆ.

ನಿರ್ಣಯ: ಪ್ರಶ್ನಿತ ಜಮೀನು ಈಗಾಗಲೇ ವಾಣಿಜ್ಯ ಉದ್ದೇಶಕ್ಕೆ ಭೂಪರಿವರ್ತನೆಯಾಗಿದ್ದು, ಮಾನ್ಯ ನ್ಯಾಯಾಲಯದ Compromise Decree ಆದೇಶದಂತೆ ಭೂಪರಿವರ್ತಿತ ಜಮೀನಿನ ಪೈಕಿ 1.35 ಎಕರೆ ವಿಸ್ತೀರ್ಣದ ಜಮೀನು ಕ್ರಯವಾಗಿದ್ದು, ಕ್ರಯದ ವಿಸ್ತೀರ್ಣಕ್ಕೆ ಈಗಾಗಲೇ ಸ್ಥಳೀಯ ಸಂಸ್ಥೆಯಲ್ಲಿ ನಮೂನೆ–3 ಅನ್ನು ನೀಡಿರುವುದರಿಂದ, ಅಗತ್ಯ ದಾಖಲಾತಿಗಳನ್ನು ಅರ್ಜಿದಾರರಿಂದ ಪಡೆದು, ಸ್ಥಳಪರಿಶೀಲಿಸಿ ವಾಣಿಜ್ಯ ವಿನ್ಯಾಸ ನಕ್ಷೆಗೆ ನಿಯಮಾನುಸಾರ ಅನುಮೋದನೆ ನೀಡಲು ಸಭೆಯು ನಿರ್ಣಯಿಸಿ ಮುಂದಿನ ಅಗತ್ಯ ಕ್ರಮಕೈಗೊಳ್ಳಲು ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಸಹಿ/–	ಸಹಿ/–
ಸದಸ್ಯ ಕಾರ್ಯದರ್ಶಿ	ಅಧ್ಯಕ್ಷರು
ಕುಶಾಲನಗರ ಯೋಜನಾ ಪ್ರಾಧಿಕಾರ	ಕುಶಾಲನಗರ ಯೋಜನಾ ಪ್ರಾಧಿಕಾರ
ಕುಶಾಲನಗರ	ಕುಶಾಲನಗರ